**ದಿನಾಂಕಃ 03.12.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದಃ**

ಅಪಘಾತಕ್ಕೆ ಒಳಪಟ್ಟ ಮಾರುತಿ ಕಾರ್ ನ್ನು ನಾನೇ ಚಾಲನೆ ಮಾಡುತ್ತಿದ್ದೆ. ವಾಹನವನ್ನು ಠಾಣೆಗೆ ನಾನೇ ತೆಗೆದುಕೊಂಡು ಹೋಗಿ ಬಿಟ್ಟಿದ್ದೆ. ಅಪಘಾತ ಆದ ನಂತರ ನನ್ನ ವಾಹನದ ಮುಂದಿನ ಬಂಪರ್ ಭಾಗ ಜಖಂಗೊಂಡಿತ್ತು ಎಂದರೆ ಸರಿ. ಅಪಘಾತ ಸ್ಥಳಕ್ಕೆ ಪೋಲಿಸರು ಬಂದಾಗ ಸಿ ಸಿ ಕ್ಯಾಮಾರದಲ್ಲಿ ನಾನು ಅಪಘಾತ ಆದ ಮೇಲೆ ವಾಹನವನ್ನು ನಿಲ್ಲಿಸದೇ ಹೋಗಿರುವ ದೃಶ್ಯಾವಳಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆಂದರೆ ಸರಿ. ಅಂತಿಮ ವರದಿ ಕಡತದಲ್ಲಿ ನನ್ನ ಮೊಬೈಲ್‌ನ ಕಾಲ್ ಡಿಟೇಲ್ಸ್ ಮತ್ತು ರೇಕಾರ್ಡ್ಸ್ ಹಾಕಿದ್ದಾರೆಂದರೆ ಸರಿ. ಪೋಲಿಸ್ ದಾಖಲೆಗಳನ್ನು ನಾನು ಎಲ್ಲೂ ಪ್ರಶ್ನೆ ಮಾಡಿಲ್ಲ. ಕ್ರಿಮಿನಲ್ ಕೇಸು ಇನ್ನು ನಡೆಯುತ್ತಿದೆ. ನನ್ನ ಕಾರ್ ಹಾಗೂ ಮೋಟಾರ್ ಸೈಕಲ್ 2 ಜಖಂಗೊಂಡಿತ್ತು ಎಂದು ಐ ಎಂ ವರದಿಯಲ್ಲಿ ಹೇಳಿರುತ್ತಾರೆಂದರೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಜಖಂ ಆಗಿರಲಿಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುವುದರಿಂದ ಪರಿಹಾರ ಹಣ ಕೊಡಲು ನಾನೇ ಬಾದ್ಯಸ್ಥನಿರುತ್ತೇನೆಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಮತ್ತು ಪರಿಮಿಟ್ ಇದೆ, ನನ್ನ ಬಳಿ ಚಾಲನ ಪರವಾನಿಗೆ ಇದೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**2ನೇ ಎದರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಅವಕಾಶ ಕೋರಿದ್ದರಿಂದ ಕಾಲವಕಾಶ ನೀಡಲಾಗಿದೆ.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**